# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1486 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 20.03.2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮಂಡ್ಯ ಜಿಲ್ಲೆಯಲ್ಲಿ 2020 ರಿಂದೀಚೆಗೆ ರೌಡಿ ಶೀಟರ್ ಪಟ್ಟಿಯಲ್ಲಿರುವವರ ಸಂಖ್ಯೆ ಹಾಗೂ ಈ ಪಟ್ಟಿಯಿಂದ ಕೈ ಬಿಡಲಾಗಿರುವವರ ಸಂಖ್ಯೆ ಎಷ್ಟು? (ವರ್ಷಾವಾರು, ತಾಲ್ಲೂಕುವಾರು ಮತ್ತು ಠಾಣಾವಾರು ಮಾಹಿತಿ ನೀಡುವುದು)</td><td>ಮಂಡ್ಯ ಜಿಲ್ಲೆಯಲ್ಲಿ 2020 ರಿಂದೀಚೆಗೆ ರೌಡಿ ಶೀಟರ್ ಪಟ್ಟಿಯಲ್ಲಿರುವವರ ಸಂಖ್ಯೆ ಹಾಗೂ ಮುಕ್ತಾಯ ಮಾಡಿರುವ ರೌಡಿ ಆಸಾಮಿಗಳ ಅಂಕಿ-ಅಂಶಗಳ ವರ್ಷವಾರು ಮಾಹಿತಿ ಕೆಳಗಿನಂತಿರುತ್ತದೆ.<br>
<table>
<tr><th>ವರ್ಷ</th><th>ರೌಡಿ ಶೀಟರ್ ಪಟ್ಟಿಯಲ್ಲಿರುವವರ ಸಂಖ್ಯೆ</th><th>ಮುಕ್ತಾಯ ಮಾಡಿರುವ ರೌಡಿ ಆಸಾಮಿಗಳ ಸಂಖ್ಯೆ</th></tr>
<tr><td>2020</td><td>2449</td><td>80</td></tr>
<tr><td>2021</td><td>2463</td><td>514</td></tr>
<tr><td>2022</td><td>2025</td><td>473</td></tr>
<tr><td>2023</td><td>1544</td><td>619</td></tr>
<tr><td>2024</td><td>1021</td><td>237</td></tr>
<tr><td>2025</td><td>896</td><td>3</td></tr>
<tr><td>ಒಟ್ಟು</td><td>10398</td><td>1926</td></tr>
</table>
<br>ತಾಲ್ಲೂಕು ಮತ್ತು ಠಾಣಾವಾರು ಮಾಹಿತಿಯನ್ನು 'ಅನುಬಂಧ-1' ರಲ್ಲಿ ಒದಗಿಸಿದೆ.</td></tr>
<tr><td>ಆ</td><td>ಇದೇ ಅವಧಿಯಲ್ಲಿ 65 ವರ್ಷ ಮೇಲ್ಪಟ್ಟವರು, ಮೃತಪಟ್ಟವರು, ಸಂಪೂರ್ಣ ವಿಕಲಚೇತನ ಅಥವಾ ಅಸ್ವಸ್ಥ ಹಾಗೂ ಸನ್ನಡತೆ ಆಧಾರದ ಮೇಲೆ ರೌಡಿ ಶೀಟರ್ ಪಟ್ಟಿಯಿಂದ ಹೆಸರು ಕೈಬಿಡಲಾಗಿರುವವ ಸಂಖ್ಯೆ ಎಷ್ಟು; (ವಿವರ ನೀಡುವುದು)</td><td>65 ವರ್ಷ ಮೇಲ್ಪಟ್ಟವರು, ಮೃತಪಟ್ಟವರು, ಸಂಪೂರ್ಣ ವಿಕಲಚೇತನ ಅಥವಾ ಅಸ್ವಸ್ಥ ಹಾಗೂ ಸನ್ನಡತೆ ಆಧಾರದ ಮೇಲೆ ರೌಡಿ ಶೀಟರ್ ಪಟ್ಟಿಯಿಂದ ಮುಕ್ತಾಯಗೊಳಿಸಿರುವ ರೌಡಿ ಆಸಾಮಿಗಳ ಒಟ್ಟು ಸಂಖ್ಯೆ 1926. ಸದರಿಯವರ ಮಾಹಿತಿಯನ್ನು 'ಅನುಬಂಧ-2'ರಲ್ಲಿ ಒದಗಿಸಿದೆ.</td></tr>
<tr><td>ಇ</td><td>ಯಾವ ಯಾವ ಸ್ವರೂಪದ ಅಪರಾಧಗಳನ್ನು ಎಸಗಿದ ಕಾರಣಕ್ಕೆ ರೌಡಿ ಶೀಟರ್ ಪಟ್ಟಿಗೆ ಹೆಸರು ಸೇರಿಸಲಾಗುತ್ತದೆ;</td><td>ರೌಡಿ ಶೀಟರ್ ಪಟ್ಟಿಗೆ ಈ ಕೆಳಕಂಡ ಅಪರಾಧಗಳನ್ನು ಮಾಡುವವರ ಹೆಸರನ್ನು ಸೇರಿಸಲಾಗುತ್ತದೆ:-<br>• ಗಂಭೀರ ಅಪರಾಧ ಪ್ರಕರಣಗಳಾದ ಕೊಲೆ, ಕೊಲೆಯತ್ನ, ಮುಂತಾದ ಪ್ರಕರಣಗಳಲ್ಲಿ ಪದೇ ಪದೇ ಭಾಗಿಯಾದ ಆರೋಪಿಗಳನ್ನು ರೌಡಿ ಶೀಟರ್ ಪಟ್ಟಿಗೆ ಸೇರಿಸಲಾಗುತ್ತದೆ.<br>• ಸಮಾಜದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವ, ಶಾಂತಿ ಕದಡುವ ಸಮಾಜಘಾತುಕ ವ್ಯಕ್ತಿಗಳನ್ನು</td></tr>
</table>

ರೌಡಿ ಶೀಟರ್ ಪಟ್ಟಿಗೆ ಸೇರಿಸಲಾಗುತ್ತದೆ.

- ಸಾರ್ವಜನಿಕರಲ್ಲಿ ಭಯ ಮೂಡಿಸಿ, ಹೆದರಿಸಿ, ಬೆದರಿಸಿ ಹಫ್ತಾ ವಸೂಲಿ ಮಾಡುವವರನ್ನು ರೌಡಿ ಶೀಟರ್ ಪಟ್ಟಿಗೆ ಸೇರಿಸಲಾಗುತ್ತದೆ.
- ಜೂಜಾಟ, ಮಟ್ಕಾ, ಗಾಂಜಾ ಇನ್ನಿತರೆ ಪ್ರಕರಣಗಳಲ್ಲಿ ಭಾಗಿಯಾಗುವವರನ್ನು ರೌಡಿ ಶೀಟರ್ ಪಟ್ಟಿಗೆ ಸೇರಿಸಲಾಗುತ್ತದೆ.
- ಸರ್ಕಾರಿ ಸ್ವತ್ತು ಅತಿಕ್ರಮಣ ಮತ್ತು ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್ ಭಾಗ–1ರ ಆದೇಶ ಸಂಖ್ಯೆ:1, 2(ಬಿ)(ಎಫ್) ಹಾಗೂ ಭಾಗ–2 ಆದೇಶ ಸಂಖ್ಯೆ 1059ರಲ್ಲಿ ನಮೂದಿಸಿರುವ ಕೃತ್ಯವೆಸಗುವ ವ್ಯಕ್ತಿಗಳ ಮೇಲೆ ರೌಡಿ ಹಾಳೆಯನ್ನು ತೆರೆಯಲಾಗುವುದು.

**ಈ** ಮಂಡ್ಯ ಜಿಲ್ಲೆಯಲ್ಲಿ 2020 ರಿಂದೀಚೆಗೆ ದಾಖಲಾದ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು; ಈ ಪೈಕಿ ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ ಹಾಗೂ ಬಂಧಿಸಲಾದ ಆರೋಪಿಗಳ ಸಂಖ್ಯೆ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)

ಮಂಡ್ಯ ಜಿಲ್ಲೆಯಲ್ಲಿ 2020 ರಿಂದೀಚೆಗೆ ದಾಖಲಾದ ಅಪರಾಧ ಪ್ರಕರಣಗಳ ಸಂಖ್ಯೆ, ಈ ಪೈಕಿ ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ ಹಾಗೂ ಬಂಧಿಸಲಾದ ಆರೋಪಿಗಳ ಸಂಖ್ಯೆ ವರ್ಷವಾರು ಮಾಹಿತಿ ಈ ಕೆಳಕಂಡಂತಿರುತ್ತದೆ:–

| ವರ್ಷ | ದಾಖಲಾದ ಅಪರಾಧ ಪ್ರಕರಣಗಳ ಸಂಖ್ಯೆ | ದಾಖಲಾದ ಅಪರಾಧ ಪ್ರಕರಣಗಳಲ್ಲಿ ಪತ್ತೆಯಾದ ಪ್ರಕರಣಗಳ ಸಂಖ್ಯೆ | ದಾಖಲಾದ ಪ್ರಕರಣಗಳಲ್ಲಿ ಬಂಧಿಸಲಾದ ಆರೋಪಿಗಳ ಸಂಖ್ಯೆ |
|---|---|---|---|
| 2020 | 6551 | 5676 | 2803 |
| 2021 | 6700 | 5795 | 2478 |
| 2022 | 6297 | 5293 | 1757 |
| 2023 | 6665 | 5608 | 1468 |
| 2024 | 6171 | 4856 | 1071 |
| 2025 | 1272 | 414 | 47 |

**ಉ** ಈ ಅವಧಿಯಲ್ಲಿ ಆದ ಕೊಲೆಗಳ ಸಂಖ್ಯೆ ಎಷ್ಟು; ಕೊಲೆ ಹಾಗೂ ಕೊಲೆ ಯತ್ನ ಸಂಬಂಧ ದಾಖಲಾದ ಪ್ರಕರಣಗಳೆಷ್ಟು;

ಈ ಅವಧಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ದಾಖಲಿಸಿರುವ ಕೊಲೆಗಳ ಸಂಖ್ಯೆ ಹಾಗೂ ಕೊಲೆಯತ್ನ ಪ್ರಕರಣಗಳ ವರ್ಷವಾರು ವಿವರಗಳು ಈ ಕೆಳಕಂಡಂತಿರುತ್ತದೆ:–

| ವರ್ಷ | ಕೊಲೆ ಪ್ರಕರಣಗಳ ಸಂಖ್ಯೆ | ಕೊಲೆ ಯತ್ನ ಪ್ರಕರಣಗಳ ಸಂಖ್ಯೆ |
|---|---|---|
| 2020 | 56 | 94 |
| 2021 | 55 | 78 |
| 2022 | 55 | 83 |
| 2023 | 44 | 79 |
| 2024 | 26 | 77 |
| 2025 | 6 | 24 |

**ಊ** ಮಂಡ್ಯ ಜಿಲ್ಲೆಯಲ್ಲಿ ಅಪರಾಧ ಚಟುವಟಿಕೆಗಳನ್ನು ತಗ್ಗಿಸಲು ಪೊಲೀಸ್ ಇಲಾಖೆ ವತಿಯಿಂದ ಕೈಗೊಂಡಿರುವ ಸುಧಾರಣಾ ಕ್ರಮಗಳೇನು?

ಮಂಡ್ಯ ಜಿಲ್ಲೆಯಲ್ಲಿ ಅಪರಾಧ ಚಟುವಟಿಕೆಗಳನ್ನು ತಗ್ಗಿಸಲು ಪೊಲೀಸ್ ಇಲಾಖೆ ವತಿಯಿಂದ ಕೈಗೊಂಡಿರುವ ಸುಧಾರಣಾ ಕ್ರಮಗಳು ಈ ಕೆಳಕಂಡಂತಿರುತ್ತವೆ:–

- ಮಂಡ್ಯ ಜಿಲ್ಲೆಯಲ್ಲಿ ಅಪರಾಧ ಪ್ರಕರಣಗಳನ್ನು ತಡೆಗಟ್ಟುವುದಕ್ಕೆ ರಾತ್ರಿ ಮತ್ತು ಹಗಲು ಗಸ್ತುವನ್ನು ನೇಮಕ ಮಾಡಿ, ರಾತ್ರಿ ವೇಳೆಯಲ್ಲಿ ಅನುಮಾನಾಸ್ಪದ ವ್ಯಕ್ತಿ ಕಂಡುಬಂದಲ್ಲಿ ಅವರುಗಳನ್ನು ವಿಚಾರಣೆ ಮಾಡಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.
- ಜಿಲ್ಲೆಯಲ್ಲಿ ನುರಿತ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಅಪರಾಧ ಪತ್ತೆ ದಳಕ್ಕೆ ನೇಮಕ ಮಾಡಿ, ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.
- ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಭೆಯನ್ನು ನಡೆಸಿ, ಸಾರ್ವಜನಿಕರಲ್ಲಿ ಅಪರಾಧ ತಡೆಗಟ್ಟುವ ಬಗ್ಗೆ ಅರಿವು ನೀಡಲಾಗುತ್ತಿರುತ್ತದೆ.
- ಜಿಲ್ಲೆಯಲ್ಲಿ ಹೆಚ್ಚು ಜನನಿಬಿಡ ಸ್ಥಳಗಳಾದ ಪಾರ್ಕ್, ಮಾರ್ಕೇಟ್, ಬಸ್ ನಿಲ್ದಾಣಗಳಲ್ಲಿ ಸಿಸಿಟಿವಿಯನ್ನು ಅಳವಡಿಸಿ ಸೂಕ್ತ ನಿಗಾ ವಹಿಸುವಂತೆ ಸೂಕ್ತ ಸಲಹೆ ನೀಡಲಾಗುತ್ತಿರುತ್ತದೆ.
- ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಗಸ್ತಿನಲ್ಲಿದ್ದು, ಹಗಲು ವೇಳೆಯಲ್ಲಿ ಹೆಚ್ಚು ಗಸ್ತು ಮಾಡುವುದು. ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ಒಂಟಿ ಮನೆ, ತೋಟದ ಮನೆ/ಸರ್ಕಾರಿ ಕಛೇರಿ ಕಡೆ ಹಾಗೂ ಶಾಲಾ-ಕಾಲೇಜುಗಳ ಬಗ್ಗೆ ನಿಗಾ ಇಡಲಾಗುತ್ತಿದೆ.
- ಜಿಲ್ಲೆಯಲ್ಲಿ ಎಲ್ಲಾ ಶಾಲಾ/ಕಾಲೇಜುಗಳಲ್ಲಿ ಸಭೆ ನಡೆಸಿ ಮಕ್ಕಳಿಗೆ ಕಾನೂನಿನ ಅರಿವು ನೀಡಿ ಅಪರಾಧ ತಡೆಗಟ್ಟುವುದಕ್ಕೆ ಸೂಕ್ತ ನಿರ್ದೇಶನ ನೀಡಲಾಗುತ್ತಿದೆ.
- ಜೈಲಿನಿಂದ ಬಿಡುಗಡೆಯಾಗುವ ಕೈದಿಗಳ ಮೇಲೆ ನಿಗಾವಹಿಸಿ, ಅವರ ಚಲನ-ವಲನಗಳ ಬಗ್ಗೆ ಗಮನ ಹರಿಸಲಾಗುತ್ತಿದೆ.
- ಜಿಲ್ಲೆಯ ಎಲ್ಲಾ ರೌಡಿ ಆಸಾಮಿಗಳು ಮತ್ತು ಎಂಓಬಿ ಅಸಾಮಿಗಳ ಚಟುವಟಿಕೆಗಳ ಬಗ್ಗೆ ಗಮನ ಹರಿಸಿ, ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಲಾಗುತ್ತಿದೆ.
- ಜಿಲ್ಲೆಯಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ, ಜಾಗೃತ ಫಲಕಗಳನ್ನು ಅಳವಡಿಸಿ, ಯಾವೂದೇ ಅಹಿತಕರ ಘಟನೆ ಸಂಭವಿಸದಂತೆ ತಡೆಯಲಾಗುತ್ತಿದೆ.

ಜಿಲ್ಲೆಯಲ್ಲಿ ಅಪರಾಧ ತಡೆಗಟ್ಟುವುದಕ್ಕೆ ಇಆರ್‌ಎಸ್‌ಎಸ್-112 ವಾಹನವನ್ನು ಹಗಲು ಮತ್ತು ರಾತ್ರಿ ಪಾಳಿಗಳಲ್ಲಿ ಕರ್ತವ್ಯಕ್ಕೆ ನೇಮಕ ಮಾಡಿದ್ದು, ಘಟನೆ ನಡೆದ ಸ್ಥಳಕ್ಕೆ 10 ರಿಂದ 15 ನಿಮಿಷದಲ್ಲಿ ತಲುಪಿ ಮುಂದಾಗುವ ಅಹಿತಕರ ಘಟನೆಗಳನ್ನು ತಪ್ಪಿಸಲು ಇದು ಸಹಕಾರಿಯಾಗಿರುತ್ತದೆ.

ಹೆಚ್‌ಡಿ 137 ಎಸ್‌ಎಸ್‌ಟಿ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

## ಅನುಬಂಧ-1

| ಕ್ರ.ಸಂ | ತಾಲ್ಲೂಕು | ಪೊಲೀಸ್ ಠಾಣೆ | ರೌಡಿ ಶೀಟರ್ ಪಟ್ಟಿಯಲ್ಲಿರುವವರ ಸಂಖ್ಯೆ | | | | | | ರೌಡಿ ಶೀಟರ್ ಪಟ್ಟಿಯಿಂದ ಕೈ ಬಿಡಲಾಗಿರುವವವರ ಸಂಖ್ಯೆ | | | | | |
|---|---|---|---|---|---|---|---|---|---|---|---|---|---|---|
| | | | 2020 | 2021 | 2022 | 2023 | 2024 | 2025 | 2020 | 2021 | 2022 | 2023 | 2024 | 2025 |
| 1. | ಮಂಡ್ಯ | ಪೂರ್ವ ಠಾಣೆ | 97 | 100 | 76 | 77 | 68 | 68 | 3 | 29 | 0 | 10 | 7 | 0 |
| 2. | ಮಂಡ್ಯ | ಸೆಂಟ್ರಲ್ ಠಾಣೆ | 53 | 99 | 89 | 66 | 53 | 45 | 0 | 10 | 23 | 13 | 18 | 0 |
| 3. | ಮಂಡ್ಯ | ಪಶ್ಚಿಮ ಠಾಣೆ | 201 | 173 | 140 | 57 | 32 | 40 | 28 | 33 | 24 | 83 | 14 | 0 |
| 4. | ಮಂಡ್ಯ | ಬಸರಾಳು ಠಾಣೆ | 58 | 58 | 20 | 9 | 5 | 5 | 0 | 38 | 11 | 4 | 5 | 0 |
| 5. | ಮಂಡ್ಯ | ಕೆರಗೋಡು ಠಾಣೆ | 53 | 50 | 35 | 40 | 19 | 12 | 3 | 18 | 0 | 21 | 7 | 0 |
| 6. | ಮಂಡ್ಯ | ಶಿವಳ್ಳಿ ಠಾಣೆ | 0 | 1 | 0 | 3 | 5 | 2 | 3 | 58 | 8 | 9 | 3 | 0 |
| 7. | ಮಂಡ್ಯ | ಮಂಡ್ಯ ಗ್ರಾಮಾಂತರ | 88 | 88 | 86 | 86 | 38 | 57 | 5 | 1 | 1 | 1 | 0 | 0 |
| 8. | ಮಳವಳ್ಳಿ | ಮಳವಳ್ಳಿ ಟೌನ್ | 75 | 83 | 64 | 51 | 45 | 36 | 0 | 19 | 13 | 17 | 3 | 1 |
| 9. | ಮಳವಳ್ಳಿ | ಮಳವಳ್ಳಿ ಗ್ರಾ | 67 | 67 | 61 | 40 | 23 | 17 | 0 | 6 | 21 | 17 | 6 | 0 |
| 10. | ಮಳವಳ್ಳಿ | ಕಿರುಗಾವಲು | 53 | 53 | 33 | 27 | 25 | 25 | 0 | 21 | 6 | 2 | 0 | 0 |
| 11. | ಮಳವಳ್ಳಿ | ಬೆಳಕವಾಡಿ | 37 | 37 | 16 | 14 | 14 | 13 | 0 | 21 | 2 | 2 | 1 | 0 |
| 12. | ಮಳವಳ್ಳಿ | ಹಲಗೂರು | 87 | 102 | 96 | 71 | 47 | 39 | 0 | 6 | 25 | 25 | 8 | 0 |
| 13. | ಮದ್ದೂರು | ಕೆಸ್ತೂರು | 60 | 60 | 60 | 18 | 16 | 16 | 0 | 0 | 42 | 2 | 0 | 0 |
| 14. | ಮದ್ದೂರು | ಮದ್ದೂರು | 118 | 99 | 77 | 77 | 52 | 52 | 19 | 22 | 0 | 25 | 0 | 0 |
| 15. | ಮದ್ದೂರು | ಕೆ.ಎಂ.ದೊಡ್ಡಿ | 80 | 73 | 54 | 59 | 35 | 39 | 7 | 19 | 2 | 24 | 0 | 0 |
| 16. | ಮದ್ದೂರು | ಬೆಸಗರಹಳ್ಳಿ | 76 | 76 | 60 | 35 | 34 | 36 | 0 | 16 | 25 | 1 | 0 | 0 |
| 17. | ಮದ್ದೂರು | ಕೊಪ್ಪ | 96 | 100 | 89 | 86 | 42 | 35 | 0 | 14 | 3 | 44 | 9 | 0 |
| 18. | ನಾಗಮಂಗಲ | ನಾಗಮಂಗಲ ಟೌನ್ | 98 | 97 | 93 | 72 | 72 | 28 | 1 | 4 | 27 | 0 | 44 | 0 |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| 19. | ನಾಗಮಂಗಲ | ನಾಗಮಂಗಲ (ಗ್ರಾ) | 124 | 124 | 101 | 81 | 33 | 31 | 0 | 23 | 20 | 48 | 5 | 2 |
| 20. | ನಾಗಮಂಗಲ | ಬೆಳ್ಳೂರು | 42 | 42 | 35 | 33 | 24 | 17 | 0 | 7 | 9 | 7 | 7 | 0 |
| 21. | ನಾಗಮಂಗಲ | ಬಿಂಡಿಗನವಿಲೆ | 93 | 93 | 70 | 68 | 28 | 28 | 0 | 23 | 12 | 41 | 0 | 0 |
| 22. | ಕೆ.ಆರ್ ಪೇಟೆ | ಕೆ.ಆರ್ ಪೇಟೆ ಟೌನ್ | 178 | 178 | 157 | 126 | 69 | 63 | 0 | 11 | 29 | 42 | 14 | 0 |
| 23. | ಕೆ.ಆರ್ ಪೇಟೆ | ಕೆ.ಆರ್ ಪೇಟೆ (ಗ್ರಾ) | 117 | 121 | 93 | 79 | 51 | 41 | 0 | 28 | 17 | 29 | 10 | 0 |
| 24. | ಕೆ.ಆರ್ ಪೇಟೆ | ಕಿಕ್ಕೇರಿ | 68 | 68 | 67 | 47 | 32 | 18 | 0 | 1 | 20 | 15 | 14 | 0 |
| 25. | ಶ್ರೀರಂಗಪಟ್ಟಣ | ಶ್ರೀರಂಗಪಟ್ಟಣ ಟೌನ್ | 138 | 140 | 93 | 51 | 36 | 53 | 0 | 47 | 0 | 42 | 15 | 0 |
| 26. | ಶ್ರೀರಂಗಪಟ್ಟಣ | ಶ್ರೀರಂಗಪಟ್ಟಣ ಗ್ರಾ | 0 | 0 | 0 | 0 | 3 | 0 | 0 | 18 | 39 | 44 | 4 | 0 |
| 27. | ಶ್ರೀರಂಗಪಟ್ಟಣ | ಕೆ.ಆರ್ ಸಾಗರ | 145 | 141 | 134 | 90 | 62 | 48 | 4 | 7 | 44 | 28 | 16 | 0 |
| 28. | ಶ್ರೀರಂಗಪಟ್ಟಣ | ಅರಕೆರೆ | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 29. | ಪಾಂಡವಪುರ | ಪಾಂಡವಪುರ | 66 | 59 | 45 | 40 | 33 | 20 | 7 | 14 | 10 | 7 | 14 | 0 |
| 30. | ಪಾಂಡವಪುರ | ಮೇಲುಕೋಟೆ | 81 | 81 | 81 | 41 | 25 | 12 | 0 | 0 | 40 | 16 | 13 | 0 |
| | | ಒಟ್ಟು | **2449** | **2463** | **2025** | **1544** | **1021** | **896** | **80** | **514** | **473** | **619** | **237** | **3** |

## ಅನುಬಂಧ-2

| ವಿಷಯ | ವರ್ಷ | | | | | | |
|---|---|---|---|---|---|---|---|
| | **2020** | **2021** | **2022** | **2023** | **2024** | **2025** | **ಒಟ್ಟು** |
| 65 ವರ್ಷ ಮೇಲ್ಪಟ್ಟವರ ಸಂಖ್ಯೆ | 2 | 11 | 22 | 18 | 7 | 1 | 61 |
| ಮೃತಪಟ್ಟವರ ಸಂಖ್ಯೆ | 5 | 23 | 11 | 5 | 6 | 1 | 51 |
| ಸಂಪೂಣ ವಿಕಲಚೇತನರ ಸಂಖ್ಯೆ | 0 | 0 | 0 | 0 | 0 | 0 | 0 |
| ಅಸ್ವಸ್ಥ ಹಾಗೂ ಸನ್ನಡತೆ ಕಾರಣಕ್ಕಾಗಿ ರೌಡಿ ಪಟ್ಟಿಯಿಂದ ಬಿಟ್ಟವರ ಸಂಖ್ಯೆ | 73 | 480 | 440 | 596 | 224 | 1 | 1814 |
| | | | | | | ಒಟ್ಟು | **1926** |